KACN320042962023

Presented on : 22-11-2023
Registered on : 22-11-2023

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೊಳ್ಳೇಗಾಲ.**
**(ಪೀಠಾಸೀನ ಹನೂರು)**

**ದಿನಾಂಕಃ 15 ನೇ ಸೆಪ್ಟೆಂಬರ್ 2025**

**ಉಪಸ್ಥಿತರು**
ಶ್ರೀಮತಿ. ಕಾವ್ಯಶ್ರೀ ಎಂ. ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ .

**ಅಸಲು ದಾವಾ ಸಂಖ್ಯೆ 406/2023**

ವಾದಿಗಳು : 1. ಕುಮಾರ ಬಿನ್ ಲೇಟ್ ರುದ್ರಪ್ಪ,
ಸುಮಾರು 35 ವರ್ಷಗಳು,

2. ಮಲ್ಲೇಶ. ಆರ್ ಬಿನ್ ಲೇಟ್ ರುದ್ರಪ್ಪ,
ಸುಮಾರು 50 ವರ್ಷಗಳು,

ಇಬ್ಬರ ವಾಸಃ ಮಹಾಲಿಂಗನಕಟ್ಟೆ ಗ್ರಾಮ,
ಉದ್ದನೂರು ಅಂಚೆ, ಹನೂರು ಹೋಬಳಿ,
ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ,

**(ಪ್ರತಿನಿಧಿಸುವವರುಃ ಶ್ರೀ.ಎಂ. ಆರ್.ಕೆ., ವಕೀಲರು)**

**ವಿರುದ್ದ/-**

ಪ್ರತಿವಾದಿಗಳು : 1. ಆರ್. ಮಲ್ಲೇಶ್ ಬಿನ್ ರುದ್ರಸ್ವಾಮಿ, 30 ವರ್ಷ,
2. ದೀಪಕ್ ಅಃ ದೀಪು ಬಿನ್ ಬಸವಣ್ಣ, 24 ವರ್ಷ,
3. ಪ್ರಭುಸ್ವಾಮಿ ಬಿನ್ ಮಹದೇವಪ್ಪ, 40 ವರ್ಷ,

ಎಲ್ಲರ ವಾಸಃ ಮಹಾಲಿಂಗನಕಟ್ಟೆ ಗ್ರಾಮ,
ಉದ್ದನೂರು ಅಂಚೆ, ಹನೂರು ಹೋಬಳಿ,
ಹನೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ.
**(ಪ್ರತಿವಾದಿಯರ ಪರ ಶ್ರೀ.ಎಸ್. ಆರ್. ಎ., ವಕೀಲರು)**

**-:<u>ಮಧ್ಯಂತರ ಅರ್ಜಿ ಸಂಖ್ಯೆ-1ರ ಪಕ್ಷಗಾರರ ಸ್ಥಾನಮಾನ</u>:-**

ಅರ್ಜಿದಾರರು : ಕುಮಾರ ಮತ್ತು ಇತರರು
....... ವಾದಿಗಳು

**- ವಿರುದ್ಧ -**

ಎದುರುದಾರರು: ಆರ್. ಮಲ್ಲೇಶ ಮತ್ತು ಇತರರು
....... ಪ್ರತಿವಾದಿಗಳು

**-:<u>ಮಧ್ಯಂತರ ಅರ್ಜಿ ಸಂಖ್ಯೆ-2ರ ಪಕ್ಷಗಾರರ ಸ್ಥಾನಮಾನ</u>:-**

ಅರ್ಜಿದಾರರು : ಆರ್. ಮಲ್ಲೇಶ ಮತ್ತು ಇತರರು
....... 1ನೇ ಪ್ರತಿವಾದಿ

**- ವಿರುದ್ಧ -**

ಎದುರುದಾರರು: ಕುಮಾರ ಮತ್ತು ಇತರರು
....... ವಾದಿಗಳು

| | | |
|---|---|---|
| *i* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151<br>ಸಿ. ಪ್ರ. ಸಂ. ಕ್ರಮಾದೇಶ 39 ನಿಯಮ 4 ಸಹವಾಚಕ ಕಲಂ 151 |
| *ii* | ಮಧ್ಯಂತರ ಅರ್ಜಿಯಲ್ಲಿ ಕೋರಿರುವ ಪರಿಹಾರ | ತಾತ್ಕಾಲಿಕ ತಡೆಯಾಜ್ಞೆ ಆದೇಶ ಹಾಗೂ ತಡೆಯಾಜ್ಞೆ ಆದೇಶವನ್ನು ತೆರವುಗೊಳಿಸುವಂತೆ ಕೋರಿ |
| *iii* | ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | ***21.11.2023* ಮತ್ತು *18.12.2023*** |
| *iv* | ಮಧ್ಯಂತರ ಅರ್ಜಿಯ ಸಂಖ್ಯೆ | **ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು 2** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | ***18.12.2023* ಮತ್ತು *15.02.2024*** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | ***15.09.2025*** |

**<u>ಅರ್ಜಿದಾರರುಗಳು ದಾಖಲು ಮಾಡಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ಮತ್ತು 2 ರ ಮೇಲಿನ ಆದೇಶ</u>**

ಅರ್ಜಿದಾರರು/ವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1ನ್ನು ದಾಖಲು ಮಾಡಿ, ದಾವಾ 'ಬಿ' ಅನುಸೂಚಿತ ಸ್ವತ್ತಿನ ವಿಸ್ತರಣೆ ಮಾಡಿ ದಾವಾ 'ಬಿ' ಅನುಸೂಚಿತ ಸ್ವತ್ತಿನ ವಿಸ್ತರಣೆ ಮಾಡುವ ಮೂಲಕ ದಾವಾ ಅನುಸೂಚಿತ 'ಎ' ಸ್ವತ್ತಿನ ವಾದಿಯ ಸ್ವಾಧೀನಾನುಭವಕ್ಕೆ ಧಕ್ಕೆಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿಕೊಂಡಿರುತ್ತಾರೆ.

ಅದೇ ರೀತಿಯಾಗಿ, ಅರ್ಜಿದಾರರು/1ನೇ ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 4 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 2ನ್ನು ದಾಖಲು ಮಾಡಿ ನ್ಯಾಯಾಲಯವು ಈ ದಾವೆಯಲ್ಲಿ ಹೊರಡಿಸಲಾಗಿರುವ ಏಕಪಕ್ಷೀಯ ಆದೇಶವನ್ನು ತೆರವುಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

2. ಅರ್ಜಿದಾರರು/ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1ರ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ ಎರಡನೇ ಅರ್ಜಿದಾರರು ಪ್ರಮಾಣಿಕರಿಸಿರುತ್ತಾರೆ. ಸದರಿಯವರು ಪ್ರತಿವಾದಿಗಳು ದಾವಾ ಅನುಸೂಚಿತ 'ಬಿ' ಷೆಡ್ಯೂಲ್ ಬಂಡಿದಾರಿಯನ್ನು ಕಾನೂನಿಗೆ ವಿರುದ್ದವಾಗಿ 30 ಅಡಿಗೆ ವಿಸ್ತರಿಸಲು ಪ್ರಯತ್ನಿಸುತ್ತಿರುತ್ತಾರೆ. ಆ ರೀತಿ ಪ್ರಯತ್ನದಲ್ಲಿ ಪ್ರತಿವಾದಿಯರು ಸಫಲರಾದರೇ ಅರ್ಜಿದಾರರ ಸ್ವತ್ತು ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಹಾಗಾಗಿ ನಿರ್ಬಂಧಕಾಜ್ಞೆ ಅವಶ್ಯಕವಾಗಿರುತ್ತದೆ. ಮುಂದುವರೆದು ಕರ್ನಾಟಕ ಭೂ ಕಂದಾಯ ಅಧಿನಿಯಮದಂತೆ ಬಂಡಿದಾರಿ 12 ಅಡಿವುಳ್ಳದ್ದಾಗಿರುತ್ತದೆ, ಸದರಿ ದಾರಿಯಲ್ಲಿ ವ್ಯವಸಾಯದ ಕಾರ್ಯಾಚರಣೆಗಳನ್ನು ನೆರವೇರಿಸುವ ಕಾರಣಕ್ಕಾಗಿ ವಾಹನಗಳು ಸುಲಭವಾಗಿ ಸಂಚರಿಸುವ ಅನುಕೂಲಕ್ಕಾಗಿ ಆಗಿರುತ್ತದೆ. ಅರ್ಜಿದಾರರು ಮತ್ತು ಇನ್ನಿತರ ಸದರಿ ದಾರಿಗೆ ಲಗತ್ತಗಾಗಿರುವ ಸ್ವತ್ತಿನ ಮಾಲೀಕರು ಸದರಿ ಬಂಡಿ ದಾರಿಯನ್ನು ಉಪಯೋಗಿಸುತ್ತಿರುತ್ತಾರೆ. ಪ್ರತಿವಾದಿಯರು ಯಾವುದೇ ಶಾಸನಾತ್ಮಕ ಅಗತ್ಯತೆಗಳನ್ನು ನೆರವೇರಿಸದೇ ಕೇವಲ ದಾವಾ 'ಎ' ಷೆಡ್ಯೂಲ್ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಈ ಕೃತ್ಯ ಎಸಗಿರುತ್ತಾರೆ. ಅದನ್ನು ತಡೆಯುವ ನಿಟ್ಟಿನಲ್ಲಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹೋಗಿದ್ದು ಅಲ್ಲಿ ಸಕರಾತ್ಮಕ ಫಲಿತಾಂಶ ಪಡೆಯಲು ಸಾಧ್ಯವಾಗಿರುವುದಿಲ್ಲ. ಅರ್ಜಿದಾರರು ಹಾಜರು ಪಡಿಸಿರುವ ವಾಸ್ತವಿಕತೆಯು ಪುಷ್ಟೀಕರಿಸುವಂತಹ ಸಂಗತಿಗಳು ಈ ಅರ್ಜಿಯ ಮೇಲ್ನೋಟಕ್ಕೆ ಕಂಡು ಬರುವ ಸಂಗತಿಯನ್ನು ಪುಷ್ಟೀಕರಿಸುತ್ತದೆ. ವಾದಿಯ ಪರವಾಗಿ ಅನುಕೂಲತೆಯ ಸಿಂಧು ಇರುತ್ತದೆ. ಪ್ರತಿವಾದಿಯು ಸದರಿ ಕೃತ್ಯವನ್ನು ತಡೆಯುವ ಕಾರಣಕ್ಕಾಗಿ ಮಧ್ಯಂತರ ತಡೆಯಾಜ್ಞೆ ಅವಶ್ಯಕವಾಗಿರುತ್ತದೆ. ಆದ ಕಾರಣ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

3. ಪ್ರತಿವಾದಿಯು ಈ ಮೇಲ್ಕಂಡ ವಾದಿಯು ಸಲ್ಲಿಸಿರುವ ಅರ್ಜಿಗೆ ತನ್ನ ತಕರಾರು ಸಲ್ಲಿಸಿರುತ್ತಾರೆ. ಅದರಂತೆ ಅರ್ಜಿದಾರರು ತಮ್ಮ ಮಧ್ಯಕಾಲೀನ ಅರ್ಜಿಯಲ್ಲಿ ಕರ್ನಾಟಕ ಸಿವಿಲ್ ರೂಲ್ಸ್ ಮತ್ತು ಪ್ರಾಕ್ಟಿಸ್ ಕಲಂ 23 ರಡಿಯಲ್ಲಿ ಅರ್ಜಿಯು ಊರ್ಜಿತವಾಗಿರುವುದಿಲ್ಲ, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದಾವಾ 'ಎ' ಷೆಡ್ಯೂಲ್ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆಯನ್ನುಂಟು ಪಡಿಸದಂತೆ ದಾವಾ 'ಬಿ' ಸ್ವತ್ತು ಸಾರ್ವಜನಿಕ ರಸ್ತೆಯಾಗಿದ್ದು, ದಾವಾ 'ಎ' ಆಸ್ತಿಯಲ್ಲಿ 'ಬಿ' ಸ್ವತ್ತು ದಾರಿ ಹಾದು ಹೋಗಿರುವುದರಿಂದ ದಾವಾ 'ಎ' ಆಸ್ತಿಯ ಸ್ವಾಧೀನಕ್ಕೆ ತೊಂದರೆಯನ್ನುಂಟು ಪಡಿಸದಂತೆ ಆದೇಶ ಮಾಡಿದ್ದೇ ಆದಲ್ಲಿ, 'ಬಿ' ಸ್ವತ್ತನ್ನು ಪ್ರತಿವಾದಿಗಳು ಉಪಯೋಗಿಸಲು ಸಾಧ್ಯವಾಗುವುದಿಲ್ಲ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದಾವಾ 'ಬಿ' ಆಸ್ತಿಯು ಅಗಲಕ್ಕೆ ಸಂಬಂಧಿಸಿದಂತೆ ಮತ್ತೊಂದು ಪರಿಹಾರವನ್ನು ಕೋರಿಕೊಂಡಿರುತ್ತಾರೆ. ಸರ್ವೆ ದಾಖಲಾತಿಗಳಂತೆ ದಾವಾ 'ಬಿ' ಆಸ್ತಿಯ ಅಗಲ 20 ಅಡಿಗಳು ಇರುತ್ತದೆ. ಆದರೆ ವಾದಿಗಳು 12 ಅಡಿ ಅಗಲ ಎಂಬುದಾಗಿ ನಮೂದು ಮಾಡಿರುತ್ತಾರೆ. ಸದರಿ ವಿಸ್ತೀರ್ಣವನ್ನು ತೀರ್ಮಾನ ಮಾಡುವ ಅಧಿಕಾರ ವ್ಯಾಪ್ತಿ ಘನ ನ್ಯಾಯಾಲಯಕ್ಕೆ ಇರುವುದಿಲ್ಲ. ಸದರಿ 'ಬಿ' ಷೆಡ್ಯೂಲ್ ಸ್ವತ್ತು 20 ಅಡಿಗಳು ಇರುವುದು ವಾದಿಗೆ ತಿಳಿದ ಸಂಗತಿಯಾಗಿರುತ್ತದೆ. ಸದರಿ ರಸ್ತೆಯ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ತಹಶೀಲ್ದಾರ್ ರವರ ನಡುವೆ ವಿವಾದವಿರುತ್ತದೆ. ಈ ದಾವೆಯ 3ನೇ ಪ್ರತಿವಾದಿಗಳು ಅವಶ್ಯಕ ವ್ಯಕ್ತಿಗಳಾಗಿರುವುದಿಲ್ಲ.

ದಾವಾ 'ಬಿ' ಸ್ವತ್ತು ಸಾರ್ವಜನಿಕ ರಸ್ತೆಯಾಗಿದ್ದು, ಸದರಿ ರಸ್ತೆಯ ಮೂಲಕ ತಮ್ಮ ಸ್ವತ್ತಿಗೆ ಹಾದು ಹೋಗಿ ತಮ್ಮ ಸ್ವತ್ತುಗಳಲ್ಲಿ ವ್ಯವಸಾಯ ಮಾಡುತ್ತಿದ್ದು, ಪ್ರತಿವಾದಿಗಳು ದಾರಿಯನ್ನು ಉಪಯೋಗಿಸದಂತೆ ಅಡ್ಡಿಯನ್ನುಂಟು ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ದಾಖಲು ಮಾಡಲಾಗಿರುತ್ತದೆ. ವಾದಿಯು ಈ ನ್ಯಾಯಾಲಯದ ಏಕಪಕ್ಷೀಯ ಆದೇಶವನ್ನು ಮುಂದಿಟ್ಟುಕೊಂಡು ಹನೂರು ತಹಶೀಲ್ದಾರ್ ರವರ ಕಾಮಗಾರಿಯನ್ನು ತಡೆಯಲು ಮುಂದಾಗಿರುತ್ತಾರೆ. ಒಂದು ವೇಳೆ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿದ್ದೇ ಆದಲ್ಲಿ 1 ರಿಂದ 3ನೇ ಪ್ರತಿವಾದಿಯರು ದಾವಾ 'ಬಿ' ಷೆಡ್ಯೂಲ್ ಸ್ವತ್ತಿನ 20 ಅಡಿ ಅಗಲವುಳ್ಳ ದಾರಿಯ ಸ್ವಾಧೀನವನ್ನು ಕಳೆದುಕೊಳ್ಳಬೇಕಾಗಿರುತ್ತದೆ. ವಾದಿಯರು ದಾವಾ 'ಬಿ' ಅನುಸೂಚಿತ ಸ್ವತ್ತಿನಲ್ಲಿ ಯಾವುದೇ ರೀತಿಯಲ್ಲಿಯೂ ಸಹ ಸ್ವಾಧೀನಾನುಭವದಲ್ಲಿ ಇರುವುದಿಲ್ಲ. ಅದರಂತೆ, ಸದರಿ ಸ್ವತ್ತಿನಲ್ಲಿ ಯಾವುದೇ ಹಕ್ಕು ಬಾಧ್ಯತೆ ಇರುವುದಿಲ್ಲ, ಆದಕಾರಣ ಅರ್ಜಿದಾರರ ಮಧ್ಯಕಾಲೀನ ಅರ್ಜಿಯನ್ನು ತಿರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

ಮುಂದುವರೆದು, ಪ್ರತಿವಾದಿಯರು ಪ್ರಮಾಣಪತ್ರ ಖಂಡಿಕೆ 1 ರಿಂದ 4 ರಲ್ಲಿನ ಸಂಗತಿಳನ್ನು ಅಲ್ಲಗಳೆಯುತ್ತಾರೆ. ಈ ಎಲ್ಲಾ ಕಾರಣಗಳಿಗಾಗಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ.

4. ಪ್ರತಿವಾದಿಯು ನ್ಯಾಯಾಲಯದ ಸಮಕ್ಷಮ ಹಾಜರಾಗಿ ಮಧ್ಯಂತರ ಅರ್ಜಿ ಸಂಖ್ಯೆ 2 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 4 ಹಾಗೂ ಕಲಂ 151 ರಡಿಯಲ್ಲಿ ಅರ್ಜಿ ಸಲ್ಲಿಸಿ ಏಕಪಕ್ಷೀಯ ಆದೇಶವನ್ನು ತೆರವುಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ 1ನೇ ಪ್ರತಿವಾದಿಯು, 2 ಮತ್ತು 3ನೇ ಪ್ರತಿವಾದಿಯ ಪರವಾಗಿ ಅಶಜಿಯನ್ನು ದಾಖಲು ಮಾಡಿರುತ್ತಾರೆ. ವಾದಿಯು ಘನ ನ್ಯಾಯಾಲಯದಿಂದ ಏಕಪಕ್ಷೀಯ ಆದೇಶವನ್ನು ಪಡೆದುಕೊಂಡಿರುತ್ತಾರೆ. ಅರ್ಜಿದಾರರ ತಿಳುವಳಿಕೆಗೆ ಬಂದನಂತರ ವಾದಿಯರು ನ್ಯಾಯಾಲಯಕ್ಕೆ ತಪ್ಪು ಮಾಹಿತಿಯನ್ನು ನೀಡಿ, ಪ್ರತಿವಾದಿಗಳ ವಿರುದ್ಧ ಏಕಪಕ್ಷೀಯ ಆದೇಶವನ್ನು ಪಡೆದುಕೊಂಡಿರುತ್ತಾರೆ. ಸದರಿ ಆದೇಶವನ್ನು ಮುಂದಿಟ್ಟುಕೊಂಡು ಅರ್ಜಿದಾರರುಗಳು ದಾರಿಯನ್ನು ಉಪಯೋಗಿಸುದಂತೆ ತಡೆಯಲಾಗಿರುತ್ತದೆ. ಪ್ರತಿವಾದಿಗಳು ದಾವಾ 'ಬಿ' ಸ್ವತ್ತಿನ 20 ಅಡಿ ವಿಸ್ತೀರ್ಣದ ದಾರಿಯನ್ನು ಉಪಯೋಗಿಸದಂತೆ ತಡೆದಿರುತ್ತಾರೆ.

ದಾವಾ 'ಬಿ' ಅನುಸೂಚಿತ ಸ್ವತ್ತು 'ಎ' ಸ್ವತ್ತಿನಲ್ಲಿ ಹಾದು ಹೋಗಿರುವ ಕಾರಣ ಸದರಿ 'ಬಿ' ಅನುಸೂಚಿತ ಸ್ವತ್ತನ್ನು ಉಪಯೋಗಿಸಲು ಯಥಾಸ್ಥಿತಿಯಂತೆ ಉಪಯೋಗಿಸಲು ಅನುಮತಿ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದರೇ, ತಂಬಲಾರದ ನಷ್ಟವುಂಟಾಗುತ್ತದೆ. ಆದಕಾರಣ ಅರ್ಜಿದಾರರು ಮೇಲ್ಕಂಡ ಅರ್ಜಿಯನ್ನು ಸಲ್ಲಿಸಿರುತ್ತಾರೆ.

5. ಅರ್ಜಿದಾರರು ಸಲ್ಲಿಸಿರುವ ಮೇಲ್ಕಂಡ ಅರ್ಜಿಗೆ ವಾದಿಯು ತಮ್ಮ ತಕರಾರು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ವಾಸ್ತವಿಕ ಮತ್ತು ಕಾನೂನಾತ್ಮಕವಾಗಿ ಊರ್ಜಿತವಾಗಿರುವುದಿಲ್ಲ. ಮುಂದುವರೆದು, ವಾದಿಯು ಯಾವುದೇ ಸಂಗತಿಗಳನ್ನು ಮುಚ್ಚಿಟ್ಟು ಆದೇಶವನ್ನು ಪಡೆದುಕೊಂಡಿರುವುದಿಲ್ಲ. ನ್ಯಾಯಾಲಯವು ಆದೇಶಿಸಿರುವ ನಿರ್ಬಂಧಕಾಜ್ಞೆಯನ್ನು ತೆರವುಗೊಳಿಸಲು ಯಾವುದೇ ಸಂದರ್ಭಗಳು ಇರುವುದಿಲ್ಲ. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 4 ರಡಿಯಲ್ಲಿನ ಘಟಕಾಂಶಗಳನ್ನು ಪೂರೈಸಿರುವುದಿಲ್ಲ.

ಅರ್ಜಿದಾರರು, ದಾವಾ 'ಬಿ' ಅನುಸೂಚಿತ ಸವತ್ತನ್ನು ಬಂಡಿ ದಾರಿ ಎಂಬುದಾಗಿ ಒಪ್ಪಿರುತ್ತಾರೆ. ಅದರೆ ಪ್ರತಿವಾದಿ ದಾವಾ 'ಬಿ' ಅನುಸೂಚಿತ ಸ್ವತ್ತಿನ ವಿಸ್ತೀರ್ಣವನ್ನು ವಿಸ್ತರಿಸಲು ಪ್ರಯತ್ನಿಸುತ್ತಿರುತ್ತಾರೆ. ಆ ಮೂಲಕ ವಾದಿಗಳ ಖಾಸಗಿ ಆಸ್ತಿಯನ್ನು ಕಬಳಿಸಲು

ಪ್ರಯತ್ನಿಸುತ್ತಿರುತ್ತಾರೆ. ಸದರಿ ಕೃತ್ಯವನ್ನು ತಡೆಯುವ ಕಾರಣಕ್ಕಾಗಿ ವಾದಿಯರು ನ್ಯಾಯಾಲಯದ ಸಮಕ್ಷಮ ಬಂದಿರುತ್ತಾರೆ. ಒಂದು ವೇಳೆ ಪ್ರತಿವಾದಿಯರ ಅರ್ಜಿಯನ್ನು ಪುರಸ್ಕರಿಸಿ ಆದೇಶವನ್ನು ತೆರವುಗೊಳಿಸಿದ್ದೇ ಆದಲ್ಲಿ, ದಾವೆಯ ಉದ್ದೇಶವೇ ವಿಫಲವಾಗುತ್ತದೆ. ಮುಂದುವರೆದು, ವಾದಿಯು ವಾಸ್ತವವಾಗಿ ದಾವಾ 'ಬಿ' ಅನುಸೂಚಿತ ಸ್ವತ್ತಿನ ವಿಸ್ತೀರ್ಣವನ್ನು ತಿಳಿಸಿರುತ್ತಾರೆ. ಸರ್ವೆ ಕೈಪಿಡಿಯಲ್ಲಿನ ನಿಯಮಗಳನ್ನು ಹೊರತುಪಡಿಸಿ ವಾದಿಯು ಬಂಡಿದಾರಿಯನ್ನು ಉಪಯೋಗಿಸುತ್ತಿರುತ್ತಾರೆ. ಆದರೆ ಪ್ರತಿವಾದಿಯು ತನ್ನ ರಾಜಕೀಯ ಸ್ಥಾನಮಾನವನ್ನು ಉಪಯೋಗಿಸಿಕೊಂಡು ಕಾನೂನುಬಾಹಿರವಾಗಿ ವಾದಿಯ ಸ್ವತ್ತನ್ನು ಕಬಳಿಸಲು ಪ್ರಯತ್ನಿಸುತ್ತಿರುತ್ತಾರೆ. ಅರ್ಜಿದಾರರು ತಮ್ಮ ವಾದವನ್ನು ಪುಷ್ಟೀಕರಿಸುವ ನಿಟ್ಟಿನಲ್ಲಿ ಹಾಜರುಪಡಿಸಿರುವ 11-ಇ ನಕಾಶೆ ದಾವಾ ಅನುಸೂಚಿತ ಸ್ವತ್ತು ಸೇರಿದ್ದಾಗಿರುವುದಿಲ್ಲ. ಒಂದು ವೇಳೆ ಅಶಜಿದಾರರ ಅರ್ಜಿಯನ್ನು ಪುರಸ್ಕರಿಸಿದ್ದೇ ಆದಲ್ಲಿ ತುಂಬಲಾರದ ನಷ್ಟವುಂಟಾಗುತ್ತದೆ. ಅದ್ದರಿಂದ ಅರ್ಜಿದಾರರು/1ನೇ ಪ್ರತಿವಾದಿ ಸಲ್ಲಿಸಿರುವ ಅರ್ಜಿಯನ್ನು ಖರ್ಚಿನೊಂದಿಗೆ ವಜಾಗೊಳಿಸಬೇಕಾಗಿ ಕೋರಿಕೊಳ್ಳುತ್ತಾರೆ.

6. ಅರ್ಜಿದಾರರುಗಳು ಸಲ್ಲಿಸಿರುವ ಮಧ್ಯತಂರ ಅರ್ಜಿ ಸಂಖ್ಯೆ 1 ಮತ್ತು 2ಕ್ಕೆ ಸಂಬಂಧಿಸಿದಂತೆ ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಅರ್ಜಿದಾರರುಗಳ ಅರ್ಜಿಯ ನ್ಯಾಯೋಚಿತ ವಿಲೇಗಾಗಿ ಈ ಕೆಳಕಂಡ ಪ್ರಶ್ನೆಗಳು ಉದ್ಭವವಾಗಿರುತ್ತವೆ.

:: **<u>ವಿವಾದಾಂಶಗಳು</u>** ::

1. ತಾತ್ಕಲಿಕ ನಿರ್ಭಂಧಕಾಜ್ಞೆಯನ್ನು ಪಡೆಯಲು ವಾದಿ ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ ?

2. ಅನುಕೂಲತೆಯ ಒಲವು ವಾದಿಗಳ ಪರವಾಗಿದೆಯೇ ?

3. ಮದ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ?

4. ಅರ್ಜಿದಾರರು/1ನೇ ಪ್ರತಿವಾದಿಯು, ವಾದಿಯು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ಏಕಪಕ್ಷೀಯ ಆದೇಶ ಪಡೆದುಕೊಂಡಿರುತ್ತಾರೆ ಎಂಬುದಾಗಿ ರುಜುವಾತು ಪಡಿಸುವರೇ?

5. ಅರ್ಜಿದಾರರು/ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ಕರ್ನಾಟಕ ಸಿವಿಲ್ ರೂಲ್ಸ್ ಆಫ್ ಪ್ರಾಕ್ಟಿಸ್ ನ ಕಲಂ.23 ರಡಿಯಲ್ಲಿ ವಿಫಲವಾಗಿದೆಯೇ?

6. ಯಾವ ಆದೇಶ ?

7. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮಕ್ಷಮ ಇರುವ ದಾಖಲೆಗಳನ್ನು ಕೂಲಕುಂಷವಾಗಿ ಪರಿಶೀಲಿಸಲಾಯಿತು. ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ -1 | : | ನಕರಾತ್ಮಕವಾಗಿ |
| ಅಂಶ -2 | : | ನಕರಾತ್ಮಕವಾಗಿ |
| ಅಂಶ -3 | : | ನಕರಾತ್ಮಕವಾಗಿ |
| ಅಂಶ -4 | : | ಸಕರಾತ್ಮಕವಾಗಿ |
| ಅಂಶ -5 | : | ನಕರಾತ್ಮಕವಾಗಿ |
| ಅಂಶ -6 | : | ಅಂತಿಮ ಆದೇಶದಂತೆ, |

**:: ಕಾರಣಗಳು ::**

8. **ಅಂಶ-5**:- ಅರ್ಜಿದಾರರು/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1 ದಿವಾಣಿ ಪ್ರಕ್ರಿಯಾ ಸಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿನ ಅರ್ಜಿಯು ಕರ್ನಾಟಕ ಸಿವಿಲ್ ರೂಲ್ಸ್ ಆಫ್ ಪ್ರಾಕ್ಟಿಸ್ ನ ಕಲಂ 23 ರಂತೆ ವಿಫಲವಾಗಿರುತ್ತದೆ ಎಂಬುದಾಗಿ ಪ್ರತಿವಾದಿಯು ತಮ್ಮ ವಾದವನ್ನು ಮಂಡಿಸಿರುತ್ತಾರೆ. ಕರ್ನಾಟಕ ಸಿವಿಲ್ ರೂಲ್ಸ್ ಆಫ್ ಪ್ರಾಕ್ಟಿಸ್ ಕಲಂ. 23 ರಂತೆ, ***"There shall be a separate application in respect of each distinct prayer. When several prayers are combined in one application, the Court may direct the applicant to confine the application only to one such prayers and to file a separate application in respect of each of the others."*** ಎಂಬುದಾಗಿರುತ್ತದೆ. ಅದರಂತೆ, ಪ್ರತಿಯೊಂದು ಪ್ರತ್ಯೇಕ ಪ್ರಾರ್ಥನೆಗೆ, ಪ್ರತ್ಯೇಕವಾಗಿಯೇ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಪರಿಹಾರ ಕೋರಲು ಬರುವುದಿಲ್ಲ, ಆ ರೀತಿ ಒಂದಕ್ಕಿಂತ ಹೆಚ್ಚು ಪರಿಹಾರ ಕೋರಿದ್ದಲ್ಲಿ, ಅವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ನಿರ್ದೇಶಿಸಿ, ಮತ್ತೊಂದು ಪರಿಹಾರಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸುವಂತೆ ನಿರ್ದೇಶಿಸಬಹುದಾಗಿರುತ್ತದೆ.

ಈ ದಾವೆಯಲ್ಲಿ ಪ್ರತಿವಾದಿಯು ತಮ್ಮ ತಕರಾರಿನಲ್ಲಿ, ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ರಲ್ಲಿ "ಎ" ಷೆಡ್ಯೂಲ್ ಸ್ವತ್ತಿನಲ್ಲಿನ ಸ್ವಾಧೀನಾನುಭವಕ್ಕೆ ಧಕ್ಕೆಯನ್ನುಂಟು ಪಡಿಸದಂತೆ ಹಾಗೂ "ಬಿ" ಷೆಡ್ಯೂಲ್ ಸ್ವತ್ತು ಸಾರ್ವಜನಿಕ ರಸ್ತೆಯಾಗಿದ್ದು, ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶಿಸುವಂತೆ ಪರಿಹಾರ ಕೋರಿಕೊಂಡಿರುತ್ತಾರೆ ಎಂಬುದಾಗಿ ವಾದ ಮಂಡಿಸಿರುತ್ತಾರೆ. ಮಧ್ಯಂತರ ಅರ್ಜಿ ಸಂಖ್ಯೆ-1ನ್ನು ಪರಿಶೀಲಿಸಲಾಗಿ ದಾವಾ “ಬಿ” ಷೆಡ್ಯೂಲ್ ಸ್ವತ್ತನ್ನು ವಿಸ್ತರಣೆ ಮಾಡುವ ಮೂಲಕ ದಾವಾ "ಎ" ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ಧಕ್ಕೆಯನ್ನುಂಟು ಪಡಿಸದಂತೆ ಕೋರಿಕೊಂಡಿರುತ್ತಾರೆ. ಅರ್ಜಿದಾರರ ಅರ್ಜಿಯಂತೆ ದಾವಾ 'ಬಿ' ಅನುಸೂಚಿತ ಸ್ವತ್ತು ಬಂಡಿದಾರಿಯಾಗಿದ್ದು, ಸದರಿ ಸ್ವತ್ತನ್ನು ವಿಸ್ತರಣೆ ಮಾಡುವ ಮೂಲಕ ಅದಕ್ಕೆ ಲಗತ್ತಾಗಿರುವ ದಾವಾ 'ಎ' ಷೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವಕ್ಕೆ ಧಕ್ಕೆಯನ್ನು ಉಂಟುಪಡಿಸಿರುತ್ತಾರೆ ಎಂಬುದಾಗಿರುತ್ತದೆ. ಅದರಂತೆ, ಅರ್ಜಿಯಲ್ಲಿ ಪರಿಹಾರವನ್ನು ಪ್ರತ್ಯೇಕಿಸಿದಾಗ ದಾವಾ 'ಬಿ' ಅನುಸೂಚಿತ ಸ್ವತ್ತನ್ನು ವಿಸ್ತಿರಣೆ ಮಾಡದಂತೆ ಆ ಮೂಲಕ 'ಎ' ಸ್ವತ್ತಿನ ಸ್ವಾಧೀನಾನುಭವಕ್ಕೆ ಧಕ್ಕೆಯನ್ನುಂಟು ಪಡಿಸದಂತೆ ಎಂಬ ಪರಿಹಾರ ಇರುತ್ತದೆ. ಆ ಮೂಲಕ ಪರಿಹಾರಗಳು ಒಂದನ್ನೊಂದು ಅವಲಂಬಿಸಿರುತ್ತದೆ. ಅಂದರೆ, 'ಬಿ' ಅನುಸೂಚಿತ ಸ್ವತ್ತನ್ನು ವಿಸ್ತಿರಿಸಿದ್ದೇ ಆದಲ್ಲಿ ಆ ಮೂಲಕ ದಾವಾ 'ಎ' ಅನುಸೂಚಿತ ಸ್ವತ್ತಿನ ಸ್ವಾಧೀನಾನುಭವಕ್ಕೆ ಧಕ್ಕೆಯುಂಟಾಗುತ್ತದೆ. ಹಾಗಾಗಿ ಸದರಿ ಪರಿಹಾರ ಕೋರಿಕೊಂಡಿರುವುದು ಪ್ರತ್ಯೇಕವಾದ ಪ್ರಾರ್ಥನೆಯಾಗಿರುವುದಿಲ್ಲ. ಯಾವುದೇ ಒಂದು ಪರಿಹಾರ ಮತ್ತೊಂದು ಪರಿಹಾರಕ್ಕೆ ಅವಲಂಬಿತವಾಗಿದ್ದರೇ ಅಂತಹ ಪರಿಹಾರ ಕೋರುವ ಪ್ರಾರ್ಥನೆ ಒಂದೇ ಆಗಿರುತ್ತದೆ.

ಅರ್ಜಿಯಲ್ಲಿ ಕೋರಿಕೊಂಡಿರುವ ಪ್ರಾರ್ಥನೆಗಳಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ಪರಿಹಾರವನ್ನು ಆದೇಶಿಸಬೇಕಾದಲ್ಲಿ ಅದು ಪ್ರತ್ಯೇಕವಾಗಿ ಪರಿಹಾರವನ್ನು ಆದೇಶಿಸಬೇಕಾದಲ್ಲಿ, ಅದು ಪ್ರತ್ಯೇಕವಾದ ಪ್ರಾರ್ಥನೆಗಳಾಗಿರುತ್ತದೆ. ಆದರೆ ಯಾವುದೇ ಒಂದು ಪರಿಹಾರ ಅನೇಕ ಪಾರ್ಥನೆಗಳಿಗೆ ಮೂಲವಾಗಿದ್ದಲ್ಲಿ, ಸದರಿ ಪ್ರಾರ್ಥನೆ ಪ್ರತ್ಯೇಕ ಪ್ರಾರ್ಥನೆ ಎಂದೆನಿಸಿಕೊಳ್ಳುವುದಿಲ್ಲ. ಈ ಅರ್ಜಿಯಲ್ಲಿಯೂ ಸಹ ಅರ್ಜಿದಾರರು ಕೋರಿಕೊಂಡಿರುವ ಪರಿಹಾರವನ್ನು ಒಂದೇ ಚರ್ಚೆಯಲ್ಲಿ ಒಂದೇ ಬಾರಿ ಆದೇಶಬಹುದಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಒಂದಕ್ಕಿಂತ ಹೆಚ್ಚು ಪರಿಹಾರವನ್ನು ಕೋರಿಕೊಂಡಿರುವುದಿಲ್ಲ. ಹಾಗಾಗಿ **ಅಂಶ-5ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.**

**9. ಅಂಶ -1 ರಿಂದ ಅಂಶ-3:-** ವಾದಿಯು ದಾವಾ "ಎ" ಅನುಸೂಚಿತ ಸ್ವತ್ತಿನ ಮಾಲೀಕರಾಗಿದ್ದು, ಸದರಿ ಸ್ವತ್ತಿಗೆ ಲಗತ್ತಾಗಿರುವ "ಬಿ" ಅನುಸೂಚಿತ ಸ್ವತ್ತಿನ ರಸ್ತೆಯನ್ನು ವಿಸ್ತರಣೆ ಮಾಡದಂತೆ, ಹಾಗೂ ಪ್ರತಿವಾದಿಯರು ಸದರಿ ರಸ್ತೆಯನ್ನು ವಿಸ್ತ್ರರಣೆ ಮಾಡುವ ಮೂಲಕ "ಎ " ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟು ಪಡಿಸದಂತೆ ತಾತ್ಕಾಲಿಕ ನಿರ್ಭಂದಕಾಜ್ಞೇಯನ್ನು ಕೋರಿ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

ವಾದಿಯು ಸಲ್ಲಿಸಿರುವ ಅರ್ಜಿ ಮತ್ತು ಪ್ರತಿವಾದಿಯು ಸಲ್ಲಿಸಿರುವ ತಕರಾರನ್ನು ಗಮನಿಸಲಾಗಿ, ದಾವಾ "ಎ" ಅನುಸೂಚಿತ ಸ್ವತ್ತು ವಾದಿಗೆ ಸೇರಿರುತ್ತದೆ ಎಂಬುದಕ್ಕೆ ಯಾವುದೇ ತಕರಾರು ಇರುವುದಿಲ್ಲ, ಮುಂದುವರೆದು, ದಾವಾ "ಬಿ" ಅನುಸೂಚಿತ ಸ್ವತ್ತು 12 ಅಡಿ ದಾರಿ ಎಂಬುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಯು ಸದರಿ "ಬಿ" ಅನುಸೂಚಿತ ಸ್ವತು ಬಂಡಿ ದಾರಿ ಎಂಬುದಕ್ಕೆ ಯಾವುದೇ ವಿವಾದ ಇರುವುದಿಲ್ಲ. ಆದರೆ, ಸದರಿ ಬಂಡಿದಾರಿಯು 12 ಅಡಿ ಅಗಲ ಇರುತ್ತದೆ ಎಂಬುದನ್ನು ಒಪ್ಪುವುದಿಲ್ಲ. ವಾದಿಯು, ಪ್ರತಿವಾದಿಯು ದಾವಾ "ಬಿ" ಅನುಸೂಚಿತ ರಸ್ತೆ 12ಅಡಿಗಳು ಇರುವುದಾಗಿ ಹಾಗೂ ಪ್ರತಿವಾದಿಯು ಸದರಿ ರಸ್ತೆಯು 18 ಅಡಿಗಳೂ ಇರುವುದಾಗಿ ತಿಳಿಸಿರುತ್ತಾರೆ. ಆದರೆ, ಈ ಹಂತದಲ್ಲಿ ಸದರಿ ರಸ್ತೆಯು ಎಷ್ಟು ವಿಸ್ತೀರ್ಣವನ್ನು ಹೊಂದಿರುತ್ತದೆ ಎಂಬುದರ ಬಗ್ಗೆ ತೀರ್ಮಾನಿಸುವ ಅವಶ್ಯಕತೆ ಇರುವುದಿಲ್ಲ. ಪ್ರತಿವಾದಿಯು ಸದರಿ ರಸ್ತೆಯನ್ನು ಅಗಲೀಕರಣ ಮಾಡುವ ಮೂಲಕ ವಾದಿಯ ದಾವಾ "ಎ" ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟುಪಡಿಸಿರುತ್ತಾರೆ ಎಂಬುದನ್ನು ಮಾತ್ರವೇ ಪರಿಗಣಿಸಬೇಕಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯ ಅರ್ಜಿ ಮತ್ತು ತಕರಾರಿನಂತೆ ದಾವಾ " ಎ'' ಅನುಸೂಚಿತ ಸ್ವತ್ತಿಗೆ ಲಗತ್ತಾಗಿ " ಬಿ" ಅನುಸೂಚಿತ ಸ್ವತ್ತು ಬಂಡಿದಾರಿ ಇರುತ್ತದೆ ಎಂಬುದಕ್ಕೆ ಯಾವುದೇ ವಿವಾದ ಇರುವುದಿಲ್ಲ. ಸದರಿ ರಸ್ತೆಯ ವಿಸ್ತ್ರೀರ್ಣವನ್ನು ಅಧಿವಿಚಾರಣೆ ಇಲ್ಲದೇ ಹಾಗೂ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸದೇ ತೀರ್ಮಾನಿಸಲು ಬರುವುದಿಲ್ಲ. ಹಾಗಾಗಿ, ದಾವಾ "ಬಿ" ಅನುಸೂಚಿತ ಸ್ವತ್ತನ್ನು ಅಗಲೀಕರಣ ಮಾಡುತ್ತಿರುತ್ತಾರೆಯೇ, ಆ ಮೂಲಕ ವಾದಿಯ "ಎ" ಅನುಸೂಚಿತ ಸ್ವತ್ತಿಗೆ ದಕ್ಕೆಯುಂಟಾಗುತ್ತಿದೆ ಎಂಬುದನ್ನು ಮಾತ್ರವೇ ಪರಿಗಣಿಸಬೇಕಾಗಿರುತ್ತದೆ.

ವಾದಿಯು ದಾವಾ "ಬಿ" ಅನುಸೂಚಿತ ಸ್ವತು 12ಅಡಿಗಳ ಬಂಡಿ ದಾರಿಯಾಗಿದ್ದು, ಸದರಿ ರಸ್ತೆಯನ್ನು 30 ಅಡಿಗಳಿಗೆ ಕಾನೂನು ಬಾಹಿರವಾಗಿ ವಿಸ್ತರಣೆ ಮಾಡಲು ಪ್ರತಿವಾದಿಗಳು ಪ್ರಯತ್ನಿಸಿದ್ದು, ಆ ಮೂಲಕ ವಾದಿಯ ದಾವಾ "ಎ" ಅನುಸೂಚಿತ ಸ್ವತ್ತಿನ ಶಾಂತಿಯುತ ಸ್ವಾದೀನಾನುಭವಕ್ಕೆ ದಕ್ಕೆಯನ್ನುಂಟುಪಡಿಸಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಯರು ಖಾಸಗಿ ವ್ಯಕ್ತಿಗಳಾಗಿದ್ದು, ಸದರಿಯವರುಗಳಿಗೆ ಸದರಿ ರಸ್ತೆಯನ್ನು ವಿಸ್ತರಣೆ ಮಾಡಲು ಅಧಿಕಾರ ಇರುವುದಿಲ್ಲ. ಒಂದು ವೇಳೇ ಆ ರೀತಿಯಾಗಿ ಪ್ರಯತ್ನಿಸಿದ್ದೇ ಆದಲ್ಲಿ, ಅದನ್ನು ಸಂಭಂದಪಟ್ಟ ಪ್ರಾಧಿಕಾರದಿಂದಲೇ ನಿರ್ವಹಿಸ ಬೇಕಾಗಿರುತ್ತದೆ. ಆದರೆ, ಆ ರೀತಿಯಾಗಿ, ಪ್ರತಿವಾದಿಯರು ಕಾಲು ದಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ ಎಂಬುದಕ್ಕೆ ಸಂಭಂದಿಸಿದಂತೆ ವಾದಿಯು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಮುಂದುವರೆದು, ಯಾವುದೇ ಒಬ್ಬ ಖಾಸಗಿ ವ್ಯಕ್ತಿಯು ಸರ್ಕಾರದ ರಸ್ತೆಯನ್ನು ಅಗಲೀಕರಣ ಮಾಡಿದ್ದೇ ಆದಲ್ಲಿ, ಅದನ್ನು ಸಂಭಂದಪಟ್ಟ ವ್ಯಕ್ತಿಗಳು ತಡೆಯುವ ಅಧಿಕಾರ ಹೊಂದಿರುತ್ತಾರೆ. ಹಾಗೂ ಸಂಭಂದ ಪಟ್ಟ ಪ್ರಾಧಿಕಾರದ ಸಮಕ್ಷಮ ದೂರು ನೀಡಿದ್ದೇ ಆದಲ್ಲಿ, ಆ ಸಂಭಂದಪಟ್ಟ ಪ್ರಾಧಿಕಾರವು ಆ ಬಗ್ಗೆ

ಕಾನೂನು ಬಾಹಿರವಾಗಿ ರಸ್ತೆ ಅಗಲೀಕರಣ ಮಾಡದಂತೆ, ಕ್ರಮ ಕೈಗೊಳ್ಳುವ ಅಧಿಕಾರವವನ್ನು ಹೊಂದಿರುತ್ತಾರೆ. ಆ ನಿಟ್ಟಿನಲ್ಲಿ ವಾದಿಯು ದಿನಾಂಕ 16.11.2023ರಂದು ಅಂದರೆ, ದಾವೆಯನ್ನು ದಾಖಲು ಮಾಡುವ 5 ದಿನಗಳ ಮೊದಲು ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ದಾವೆಯನ್ನು ದಾಖಲು ಮಾಡಿದ ನಂತರ ಸಂಬಂದ ಪಟ್ಟ ಪ್ರಾಧಿಕಾರದವರು ಪ್ರತಿವಾದಿಯರ ವಿರುದ್ದ ಯಾವ ಕ್ರಮವನ್ನು ಕೈಗೊಂಡಿರುತ್ತಾರೆ ಎಂಬ ಬಗ್ಗೆಯಾಗಲೀ, ಅಥವಾ ಆ ರೀತಿಯಾಗಿ ಸಂಬಂದಪಟ್ಟ ಪ್ರಾಧಿಕಾರದವನ್ನು ಕ್ರಯ ಕೈಗೊಳ್ಳದೇ ಇದ್ದ ಕಾರಣ ಮುಂದಿನ ಯಾವ ಕ್ರಮ ತೆಗೆದುಕೊಂಡಿರುತ್ತಾರೆ ಎಂಬುದರ ಬಗ್ಗೆ ನ್ಯಾಯಾಲಯಕ್ಕೆ ಮನದಟ್ಟು ಮಾಡಿರುವುದಿಲ್ಲ.

10. ಮುಂದುವರೆದು, ಪ್ರತಿವಾದಿಯು ಸದರಿ ರಸ್ತೆಯನ್ನು 30 ಅಡಿಗೆ ಅಗಲೀಕರಣ ಮಾಡುತ್ತಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಆ ನಿಟ್ಟಿನಲ್ಲಿ ವಾದಿಯು ಒಂದು ಪ್ರತ್ರಿಕಾ ಪ್ರಕಟಣೆಯ ತುಂಡನ್ನು ಹಾಜರುಪಡಿಸಿರುತ್ತಾರೆ. ಆದರೆ, ಅದು ಸದರಿ ಪ್ರತಿಕೆಯಲ್ಲಿ ಪ್ರಕಟವಾದ ವರದಿಯ ಪತ್ರಿಕೆಯ ನಕಲು ಪ್ರತಿವಾಗಿರುತ್ತದೆ. ಒಂದು ವೇಳೇ ಆ ಪತ್ರಿಕೆಯ ಸಂಪೂರ್ಣ ಪ್ರತಿಯನ್ನು ಹಾಜರುಪಡಿಸಿದ್ದೇ ಆದಲ್ಲಿ, ವಾದಿಯು ಹಾಜರುಪಡಿಸಿರುವಂತೆ ಸಂಗತಿಯು ಪ್ರತಿಕೆಯಲ್ಲಿ ಪ್ರಕಟವಾಗಿತ್ತು ಎಂಬುದಾಗಿ ಭಾವಿಸಬಹುದಾಗಿರುತ್ತದೆ. ವಾದಿಯು ಸಂಪೂರ್ಣ ಪತ್ರಿಕೆಯನ್ನು ಹಾಜರುಪಡಿಸದೇ ಇರುವ ಕಾರಣ ಸದರಿ ಸಂಗತಿಯು ಪರಿಗಣಿಸಲು ಬರುವುದಿಲ್ಲ. ವಾದಿಯು ಸದರಿ ಪತ್ರಿಕಾ ವರದಿಯನ್ನು ಹೊರತುಪಡಿಸಿ, ರಸ್ತೆಯನ್ನು ಪ್ರತಿವಾದಿಯರು ಅಗಲೀಕರಣ ಮಾಡುತ್ತಿರುವ ಸಂಬಂಧ ಸ್ಥಳದ ಪೋಟೋ ತೆಗೆದು ನ್ಯಾಯಾಲಯಕ್ಕೆ ಸಲ್ಲಿಸಿಕೊಳ್ಳಬಹುದಾಗಿರುತ್ತದೆ. ಆದರೆ, ವಾದಿಯು ಆ ಯಾವುದೇ ಪೋಟೋವನ್ನು ಹಾಜರುಪಡಿಸಿಕೊಂಡಿರುವುದಿಲ್ಲ. ಆದರೆ, ಪ್ರತಿವಾದಿಯರು ಈ ದಾವೆಯಲ್ಲಿ ಎರಡು ಪೋಟೋಗಳನ್ನು ಹಾಜರುಪಡಿಸಿ, ಸದರಿ ಪೋಟೋದಲ್ಲಿನ ರಸ್ತೆಯು "ಬಿ" ಅನುಸೂಚಿತ ಸ್ವತ್ತು ಎಂಬುದಾಗಿ ತಿಳಿಸಿರುತ್ತಾರೆ. ಆದರೆ, ಆ ಬಗ್ಗೆ ವಾದಿಯು ತಕರಾರು ಮಾಡಿರುವುದಿಲ್ಲ. ಹಾಗಾಗಿ, ಪ್ರತಿವಾದಿಯು ಹಾಜರುಪಡಿಸಿರುವ ಪೋಟೋ ದಾವಾ "ಬಿ" ಅನುಸೂಚಿತ ಸ್ವತ್ತಿಗೆ ಸಂಭಂದಿಸಿದ್ದು, ಎಂಬುದಾಗಿರುತ್ತದೆ. ಆದರೆ, ಸದರಿ ಪ್ರತಿವಾದಿಯು ಸಲ್ಲಿಸಿರುವ ಪೋಟೋಗಳಲ್ಲಿ ರಸ್ತೆಯನ್ನು ಅಗಲೀಕರಣ ಮಾಡುತ್ತಿರುವ ಬಗ್ಗೆ ಯಾವುದೇ ಕುರುಹುಗಳು ಕಂಡು ಬಂದಿರುವುದಿಲ್ಲ. ಸದರಿ ಪೋಟೊಗಳಂತೆ ಪ್ರತಿವಾದಿಯರು ರಸ್ತೆ ಅಗಲೀಕರಣ ಮಾಡಲು ಪ್ರಯತ್ನಿಸುತ್ತಿರುತ್ತಾರೆ ಎಂಬುದು ಕಂಡು ಬಂದಿರುವುದಿಲ್ಲ.

11. ಮುಂದುವರೆದು, ಪ್ರತಿವಾದಿಯರು ದಾವಾ "ಬಿ" ಅನುಸೂಚಿತ ಸ್ವತ್ತಿನ್ನು ಅಗಲೀಕರಣ ಮಾಡುತ್ತಿರುತ್ತಾರೆ, ಅವರ ವಿರುದ್ದ ಕ್ರಮಕೈಗೊಳ್ಳುವಂತೆ ದಿನಾಂಕ 16.11.2023 ತಹಶೀಲ್ದಾರವರಿಗೆ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಆದರೆ, ಪ್ರತಿವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ 25.10.2023 ರಂದು ಮಹಾಲಿಂಗನ ಕಟ್ಟೆ ಗ್ರಾಮಸ್ಥರು, ಹನೂರಿನ ತಹಶೀಲ್ದಾರ್ ರವರಿಗೆ ಮನವಿ ಸಲ್ಲಿಸಿ, ಸರ್ವೆ ನಂ

93ರಲ್ಲಿ ದಾರಿ ಇದ್ದು, ವಾದಿ ಮತ್ತು ಅವರ ಹೆಂಡತಿ ಮಕ್ಕಳುಗಳು ಸದರಿ ದಾರಿಯಲ್ಲಿ ಓಡಾಡುವ ಜನರಿಗೆ ಕೆಟ್ಟ ಶಬ್ದಗಳಿಂದ ಬೈಯುತ್ತಾ ಓಡಾಡಲು ತೊಂದರೆಯನ್ನುಂಟು ಪಡಿಸುತ್ತಿರುತ್ತಾರೆ ಎಂಬುದಾಗಿ ಹಾಗೂ ರಸ್ತೆಯನ್ನು ಬಿಡಿಸಿಕೊಡುವಂತೆ ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಅದರಂತೆ, ವಾದಿಯು ದಿನಾಂಕ 16.11.2023ರಂದು ಅರ್ಜಿಯನ್ನು ದಾಖಲುಮಾಡುವ ಸುಮಾರು 1 ತಿಂಗಳ ಮೊದಲಿನಿಂದಲೂ ಸಹ ದಾರಿಗೆ ಸಂಬಂದಿಸಿದಂತೆ ವಿವಾದ ಇರುವುದು ಕಂಡು ಬರುತ್ತಿದೆ. ಆ ಬಗ್ಗೆ ಕ್ರಮ ಕೈಗೊಳ್ಳುವಂತೆಯೂ ಸಹ ಮನವಿಯನ್ನು ಸಲ್ಲಿಸಿರುವುದು ಕಂಡು ಬರುತ್ತಿದೆ. ಸದರಿ ದಿನಾಂಕ 25.10.2023ರಂದು ಮಹಾಲಿಂಗನಕಟ್ಟೆ ಗ್ರಾಮಸ್ಥರ ಮನವಿಯ ಮೇರೆಗೆ ತಹಶೀಲ್ದಾರವರು ಕ್ರಮಕೈಗೊಂಡಿರುವುದು ಸಹ ಕಂಡು ಬರುತ್ತಿದೆ.

12. ಈ ದಾವೆಯಲ್ಲಿನ ವಾದಿಯ ಅರ್ಜಿ ಮತ್ತು ಪ್ರತಿವಾದಿಯ ತಕರಾರನ್ನು ಗಮನಿಸಲಾಗಿ, ವಾದಿಯು ನಿರೂಪಿಸಿದಂತೆ "ಬಿ" ಅನುಸೂಚಿತ ಸ್ವತ್ತು ಬಂಡಿ ದಾರಿಯಾಗಿದ್ದು, ಆ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ಪ್ರತಿ ಬಂಡಿ ದಾರಿಯು ಸರ್ವೆ ಕೈಪಿಡಿಯಲ್ಲಿ ತಿಳಿಸಿರುವಂತೆ ವಿಸ್ತೀರ್ಣವನ್ನು ಹೊಂದಿರುವುದು ಅವಶ್ಯಕವಾಗಿರುತ್ತದೆ. ಆದರೆ, ಈ ಹಂತದಲ್ಲಿ ಸದರಿ ಬಂಡಿ ದಾರಿಯು ಎಷ್ಟು ವಿಸ್ತೀರ್ಣ ಹೊಂದಿರುತ್ತದೆ ಎಂಬುದನ್ನು ಈ ಹಂತದಲ್ಲಿ ತೀರ್ಮಾನಿಸಲು ಬರುವುದಿಲ್ಲ. ಆದರೆ, ದಾವಾ " ಬಿ" ಅನುಸೂಚಿತ ಸ್ವತ್ತಿನ ಸ್ವರೂಪ ಬಂಡಿದಾರಿ ಎಂಬುದು ಒಪ್ಪಿತ ಸಂಗತಿಯಾಗಿರುತ್ತದೆ. ಆದರೆ, ವಾದಿಯು ನಿರೂಪಿಸಿದಂತೆ, ಪ್ರತಿವಾದಿಯು ದಾವಾ "ಬಿ" ಅನುಸೂಚಿತ ಸ್ವತ್ತಿನನ್ನು ಅಗಲೀಕರಣ ಮಾಡುತ್ತಿರುತ್ತಾರೆ ಎಂಬುದೂ ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬಂದಿರುವುದಿಲ್ಲ. ಬದಲಾಗಿ ವಾದಿಯರೇ ಸದರಿ ರಸ್ತೆಯನ್ನು ಉಪಯೋಗಿಸಲು ಅಡ್ಡಿಯನ್ನುಂಡು ಪಡಿಸಿರುತ್ತಾರೆ ಎಂಬುದು ಈ ಹಂತದಲ್ಲಿ ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮುಂದುವರೆದು, ಸಂಭಂದಪಟ್ಟ ಪ್ರಾಧಿಕಾರದವರು ವಾದಿಯ ಸ್ವತ್ತಿನಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಸ್ಥಳಕ್ಕೆ ಹೋದಾಗ, ನ್ಯಾಯಾಲಯವು ಪ್ರತಿವಾದಿಯರ ವಿರುದ್ದ ಆದೇಶಿಸಿರುವ ತಾತ್ಕಲಿಕ ನಿರ್ಭಂದಕಾಜ್ಞೇ ಆದೇಶಿಸಿರುತ್ತದೆ ಎಂಬುದಾಗಿ ಅವರ ಕೆಲಸವನ್ನು ಮಾಡಲು ಅಡ್ಡಿಯನ್ನುಂಟು ಪಡಿಸಿರುವುದು ತಹಶೀಲ್ದಾರ್ ರವರು ದಿನಾಂಕ 06.08.2024ರ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಿಂದ ಕಂಡು ಬರುತ್ತಿದೆ. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳಂತೆ, ಈ ಹಂತರಲ್ಲಿ ದಾವಾ "ಬಿ" ಅನುಸೂತಿ ಬಂಡಿ ದಾರಿಯನ್ನು ಉಪಯೋಗಿಸಲು ವಾದಿಯರೇ ಅಡ್ಡಿಯನ್ನುಂಟು ಪಡಿಸಿರುತ್ತಾರೆ ಎಂಬುದು ಕಂಡು ಬಂದಿರುತ್ತದೆ. ಆದ್ದರಿಂದ, ಅದ್ದರಿಂದ ಅಂಶ 1ರಿಂದ ಅಂಶ 3ನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

**13. <u>ಅಂಶ 4:-</u>** ಪ್ರತಿವಾದಿಯು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39ನಿಯಮ 4ರಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಿ , ವಾದಿಯು ತಪ್ಪು ಮಾಹಿತಿ ನೀಡಿ ಪಡೆದುಕೊಂಡಿರುವ ಏಕಪಕ್ಷೀಯ ಆದೇಶವನ್ನು ತೆರೆವುಗೊಳಿಸುವಂತೆ ಕೋರಿಕೊಂಡಿರುತ್ತಾರೆ.

ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39, ನಿಯಮ 4 ರಂತೆ,

> **ನಿಯಮ 4. ತಡೆಯಾಜ್ಞೆಗಾಗಿ ಹೊರಡಿಸಿದ ಆದೇಶವನ್ನು ವಿಮೋಚನೆಗೊಳಿಸಬಹುದು, ಬದಲಾಯಿಸಬಹುದು ಅಥವಾ ತಳ್ಳಿ ಹಾಕಬಹುದು.(Order for injunction may be discharged, varied or set aside)**
>
> ನಿರ್ಬಂಧಕಾಜ್ಞೆಯ ಆದೇಶದಿಂದ ಅಸಮಾಧಾನ ಹೊಂದಿದ ಯಾವನೇ ಪಕ್ಷಕಾರನು ಆ ಬಗ್ಗೆ ಸಲ್ಲಿಸಿದ ಅರ್ಜಿಯ ಮೇಲೆ ನ್ಯಾಯಾಲಯವು ಆ ಅದೇಶವನ್ನು ವಿಮೋಚನೆಗೊಳಿಸಬಹುದು ಅಥವಾ ವ್ಯತ್ಯಾಸಗೊಳಿಸಬಹುದು ಅಥವಾ ತಳ್ಳಿ ಹಾಕಬಹುದುಃ
>
> ಪರಂತು, ತಾತ್ಕಾಲಿಕ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಲಾದ ಅರ್ಜಿಯಲ್ಲಿ ಅಥವಾ ಅಂತಹ ಅರ್ಜಿಯನ್ನು ಸರ್ಮಥಿಸುವ ಯಾವುದೇ ಪ್ರಮಾಣ ಪತ್ರದಲ್ಲಿ ಮುಖ್ಯ ವಿವರಕ್ಕೆ ಸಂಬಂಧಿಸಿದಂತೆ ಯಾವನೇ ಪಕ್ಷಕಾರನು ಸುಳ್ಳಾಗಿರುವ ಅಥವಾ ತಪ್ಪು ಅಭಿಪ್ರಾಯವನ್ನು ಕೊಡುವ ಹೇಳಿಕೆಯನ್ನು ಗೊತ್ತಿದ್ದೂ ಮಾಡಿದ್ದರೆ ಮತ್ತು ಎದುರು ಪಕ್ಷಕಾರನಿಗೆ ನೋಟಿಸು ಕೊಡದೆಯೆ ನಿರ್ಬಂಧಕಾಜ್ಞೆಯನ್ನು ಮಾಡಿದ್ದರೆ ನಿರ್ಬಂಧಕಾಜ್ಞೆಯನ್ನು ತೆರವು ಮಾಡುವುದು ನ್ಯಾಯದ ದೃಷ್ಟಿಯಿಂದ ಅವಶ್ಯವಿಲ್ಲವೆಂದು ನ್ಯಾಯಾಲಯವು ತಾನ ಅಭಿಲೇಖಿಸಬೇಕಾದ ಕಾರಣಗಳಿಗಾಗಿ ಪರ್ಯಾಲೋಚಿಸಿದ ಹೊರತು, ಅದು ಆ ನಿರ್ಬಂಧಕಾಜ್ಞೆಯನ್ನು ತೆರವು ಮಾಡತಕ್ಕದ್ದುಃ
>
> ಮತ್ತೂ ಪರಂತು, ಪಕ್ಷಕಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ ನಿರ್ಬಂಧಕಾಜ್ಞೆಗಾಗಿ ಆದೇಶವನ್ನು ಮಾಡಿರುವಲ್ಲಿ ಆ ಸನ್ನಿವೇಶಗಳಲ್ಲಿ ಉಂಟಾಗಿರುವ ಬದಲಾವಣೆಯು ಆ ಆದೇಶವನ್ನು ವಿಮೋಚನೆಗೊಳಿಸುವುದನ್ನು ವ್ಯತ್ಯಾಸಗೊಳಿಸುವುದನ್ನು ಅಥವಾ ತಳ್ಳಿಹಾಕುವುದನ್ನು ಅವಶ್ಯಗೊಳಿಸಿರುವಲ್ಲಿ ಹೊರತು, ಅಥವಾ ಆ ಆದೇಶವು ಆ ಪಕ್ಷಕಾರನಿಗೆ ಸಲ್ಲದ ಕಷ್ಟವನ್ನುಂಟು ಮಾಡಿದೆಯೆಂದು ನ್ಯಾಯಾಲಯಕ್ಕೆ ಮನದಟ್ಟಾದ ಹೊರತು, ಪಕ್ಷಕಾರನ ಅರ್ಜಿಯ ಮೇಲೆ ಆ ಆದೇಶವನ್ನು ಹಾಗೆ ವಿಮೋಚನೆಗೊಳಿಸತಕ್ಕುದಲ್ಲ, ವ್ಯತ್ಯಾಸಗೊಳಿಸತಕ್ಕುದಲ್ಲ, ಅಥವಾ ತಳ್ಳಿಹಾಕತಕ್ಕುದಲ್ಲ.

ಎಂಬುದಾಗಿ ತಿಳಿಸಿರುತ್ತಾರೆ. ಅದರಂತೆ, ಯಾವುದೇ ಒಬ್ಬ ವ್ಯಕ್ತಿಯು ಸುಳ್ಳಾಗಿರುವ ಅಥವಾ ತಪ್ಪು ಅಭಿಪ್ರಾಯವನ್ನು ಕೊಡುವ ಹೇಳಿಕೆಯನ್ನು ಗೊತ್ತಿದ್ದೂ ಮಾಡಿದ್ದರೆ ಮತ್ತು ಎದುರು ಪಕ್ಷಕಾರನಿಗೆ

ನೋಟಿಸು ಕೊಡದೆಯೇ ನಿರ್ಬಂಧಕಾಜ್ಞೆಯನ್ನು ಮಾಡಿದ್ದರೆ ನಿರ್ಬಂಧಕಾಜ್ಞೆಯನ್ನು ತೆರವು ಮಾಡಬಹುದಾಗಿರುತ್ತದೆ. ಈ ದಾವೆಯಲ್ಲಿ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯ 2 ನ್ನು ದಾಖಲು ಮಾಡಿ, ವಾದಿಯು ದಾವಾ " ಬಿ" ಅನುಸೂಚಿತ ಸ್ವತ್ತು 18ಅಡಿಗಳಿದ್ದು, ಅದನ್ನು 12 ಅಡಿಗಳ ವಿಸ್ತೀರ್ಣ ಎಂಬುದಾಗಿ ತಿಳಿಸಿ, ನ್ಯಾಯಾಲಯದಿಂದ ಏಕಪಕ್ಷೀಯ ಆದೇಶವನ್ನು ಪಡೆದಿರುತ್ತಾರೆ. ಆದ್ದರಿಂದ, ಏಕಪಕ್ಷೀಯ ಆದೇಶವನ್ನು ತೆರವುಗೊಳಿಸಿವಂತೆ ಕೋರಿಕೊಂಡಿರುತ್ತಾರೆ. ಆದರೆ, ವಾದಿಯು ತನ್ನ ವಾದವನ್ನು ಮಂಡಿಸುವ ಹಂತರಲ್ಲಿ , ಒಂದು ಬಂಡಿದಾರಿಯ ವಿಸ್ತೀರ್ಣ ಸರ್ವೆ ಮ್ಯಾನುವೆಲ್ ನಲ್ಲಿ ತಿಳಿಸಿರುವಂತೆಯೇ ಇರತಕ್ಕದ್ದು ಎಂಬುದಾಗಿ ತಿಳಿಸಿರುತ್ತಾರೆ. ಆದರೆ, ವಾದಿಯು ತನ್ನ ವಾದಪತ್ರದಲ್ಲಿನ "ಬಿ" ಅನೂಸೂಚಿತ ಸ್ವತ್ತು 12 ಅಡಿ ಗಳ ವಿಸ್ತೀರ್ಣ ಇರುತ್ತದೆ ಎಂಬುದಾಗಿ ತಿಳಿಸಿರುತ್ತಾರೆ. ಅದರಂತೆ, ವಾದಿಯು ವಾದಪತ್ರ ಮತ್ತು ಅರ್ಜಿಯಲ್ಲಿ ತಿಳಿಸಿರುವಂತೆ ಬಂಡಿ ದಾರಿಯು ಕೇವಲ 12 ಅಡಿ ವಿಸ್ತೀರ್ಣ ಇರುವುದಿಲ್ಲ ಎಂಬುದಾಗಿರುತ್ತದೆ. ಆದ್ದರಿಂದ, ಪ್ರತಿವಾದಿಯ ವಿರುದ್ಧ ಆದೇಶಿಸಲಾಗಿದ್ದ ಏಕಪಕ್ಷೀಯ ಆದೇಶವನ್ನು ತೆರೆವುಗೊಳಿಸುವುದು ಅವಶ್ಯಕವೆಂದು ಕಂಡು ಬಂದಿರುತ್ತದೆ. ಆದ್ದರಿಂದ ಅಂಶ 4ನ್ನು ಸಕರಾತ್ಮಕವಾಗಿ ಉತ್ತರಿಸಲಾಗಿದೆ.

14. **ಅಂಶ-6** :- ಮೇಲ್ಕಂಡಂತೆ ಅಂಶ 1 ರಿಂದ 5 ರಲ್ಲಿ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆಃ-

-: **ಆದೇಶ** :-

ಅರ್ಜಿದಾರರು/ವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ತಿರಸ್ಕರಿಸಲಾಗಿದೆ.

ಅರ್ಜಿದಾರರು/ಒಂದನೇ ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 4 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 2 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ಸದರಿ ಆದೇಶದಂತೆ, ವಾದಿಯ ಪರವಾಗಿ ಆದೇಶಿಸಲಾಗಿದ್ದ ಏಕಪಕ್ಷೀಯ ಆದೇಶವನ್ನು ತೆರೆವುಗೊಳಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 15.09.2025 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ ಎಂ)**
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.(ಪೀಠಾಸೀನ ಹನೂರು)

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು.)**

-: **ಆದೇಶ** :-

ಅರ್ಜಿದಾರರು/ವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 1 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ತಿರಸ್ಕರಿಸಲಾಗಿದೆ.

ಅರ್ಜಿದಾರರು/ಒಂದನೇ ಪ್ರತಿವಾದಿ ಸಲ್ಲಿಸಿರುವ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 4 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ 2 ರಡಿಯಲ್ಲಿನ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ. ಸದರಿ ಆದೇಶದಂತೆ, ವಾದಿಯ ಪರವಾಗಿ ಆದೇಶಿಸಲಾಗಿದ್ದ ಏಕಪಕ್ಷೀಯ ಆದೇಶವನ್ನು ತೆರೆವುಗೊಳಿಸಲಾಗಿದೆ.

**(ಕಾವ್ಯಶ್ರೀ ಎಂ)**
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,
ಕೊಳ್ಳೇಗಾಲ.(ಪೀಠಾಸೀನ ಹನೂರು)

For Issues by 23.10.2025.

C/C ACJ & JMFC., KOLLEGAL.
{Sitting at Hanur)

Case called out. While preparing order, it is observed by this court that defendant filed their written statement on 07.09.2023. On same day stage fixed for objection to IA. But defendant have not filed objection to IA. Even defendant has not filed memo by adopting contents of written statement. But, the counsel for defendant has advanced his argument on IA. Hence, before pronouncing order it is necessary to clarify the same. Call on 08.01.2025.

IV ACJ & JMFC., Hassan.